ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ: ನೃ.ನಾ.ವಿಭಾಗ:ವಿ.ವಿಚಾರಗೋಷ್ಠಿ ಅನುಷ್ಠಾನ 2018-19 ದಿನಾಂಕ: 30-08-2018

ಗೆ,
ಪ್ರಾಂಶುಪಾಲರು
ಜಿಲ್ಲಾಶಿಕ್ಷಣ ಮತ್ತು ತರಬೇತಿ ಸಂಸ್ಥೆ,
ಬೆಂಗಳೂರು ನಗರ
ಬೆಂಗಳೂರು ಜಿಲ್ಲೆ

ವಿಷಯ: 2018-19ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ರಾಜ್ಯ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿ ಕಾರ್ಯಕ್ರಮವನ್ನು ಆಯೋಜನೆ ಕುರಿತು.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ:ಯೋ(1) ಮ.ಯೋ.ಕಾ.ಹ.ಬಿ.01/2018-19 ದಿನಾಂಕ: 16.05.2018
2) ಈ ಕಛೇರಿಯ ಪತ್ರ ಸಂಖ್ಯೆ: ನಾ.ನೃ.ಸಂ.ವಿ.ಕಾ.ಅನು -01/2018-19 ದಿನಾಂಕ: 27.06.2018

-&&&&&&&-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿ ಬಹುತೇಕ ಪೂರ್ಣಗೊಂಡಿದ್ದು, ಈ ಸಲವೂ ರಾಜ್ಯಮಟ್ಟದ ವಿದ್ಯಾರ್ಥಿಗಳ ವಿಜ್ಞಾನ ವಿಚಾರ ಗೋಷ್ಠಿಯನ್ನು ಡಯಟ್ ಬೆಂಗಳೂರು ವತಿಯಿಂದ ಆಯೋಜಿಸಲು ತಿಳಿಸಿದೆ. ರಾಜ್ಯ ಹಂತದ ಕಾರ್ಯಕ್ರಮವನ್ನು ದಿನಾಂಕ: 30.09.2018 ರೊಳಗೆ ಆಯೋಜಿಸಲು ಕ್ರಮವಹಿಸುವುದು. ಈ ಸ್ಪರ್ಧಾ ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸಲು ಬೇಕಾದ ವ್ಯವಸ್ಥೆ ಬಗ್ಗೆ ಕೂಡಲೇ ಸಿದ್ಧತೆ ಮಾಡಿಕೊಳ್ಳುವುದು. ಹಾಗೂ ಕಾರ್ಯಕ್ರಮದ ಆಯೋಜನೆ ಬಗ್ಗೆ ಪ್ರಗತಿ ವರದಿಯನ್ನು ಒಂದು ವಾರದೊಳಗೆ ಈ ಕಛೇರಿಗೆ ಸಲ್ಲಿಸುವುದು.

ವಿಷಯದ ಆಳವಾದ ಜ್ಞಾನವುಳ್ಳ ಸಂಪನ್ಮೂಲ ವ್ಯಕ್ತಿಗಳನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಿಕೊಂಡುಸದರಿಯವರಿಂದ ವಿದ್ಯಾರ್ಥಿಗಳ ವಿಷಯ ಮಂಡನೆಯನ್ನು ಪಾರದರ್ಶಕವಾಗಿ ಮೌಲ್ಯಮಾಪನ ಮಾಡಿಸುವುದು.

1. ಸಮಯ ಮತ್ತು ಗುಣಮಟ್ಟದ ದೃಷ್ಠಿಯಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವುದು-LCD.OHP.Chart Stand ಇತ್ಯಾದಿ
2. ವಿಚಾರ ಗೋಷ್ಠೀ ದಾಖಲೀಕರಣಕ್ಕೆ ಅಗತ್ಯ ಸಿದ್ಧತೆಗಳು – ವೀಡಿಯೋ, ಪೋಟೋ.
3. ನೋಂದಣಿ ಕಾರ್ಯಕ್ರಮದ ವರದಿ, ದಾಖಲೀಕರಣಕ್ಕೆ ಅಗತ್ಯ ಕ್ರಮ.
   10 ಅಂಕಗಳ, 20ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಸ್ಪರ್ಧಿಗಳಿಗೆ ನೀಡಬೇಕಿದ್ದು, ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವುದು.ಇದು ಸ್ಪರ್ಧೆಯ ಭಾಗವಾಗಿರುತ್ತದೆ.
4. ಹಾಜರಾಗುವ ಸ್ಪರ್ಧಿಗಳು, ಅವರನ್ನು ಕರೆತರುವ ಶಿಕ್ಷಕರು, ತೀರ್ಪುಗಾರರು, ಟೈಮ್ ಕೀಪರ್ ಮತ್ತು ಆಯೋಜಕರಿಗೆ ಅಗತ್ಯ ಊಟ, ಉಪಹಾರ, ಕಾಫಿ/ಟೀ ವ್ಯವಸ್ಥೆ ಮತ್ತು ಅಗತ್ಯವಿದ್ದಲ್ಲಿ ತಂಗುವ ವ್ಯವಸ್ಥೆ.

ವಿ.ಐ.ಟಿ.ಎಂ. ಬೆಂಗಳೂರು ಇಲ್ಲಿನ ಎಜುಕೇಷನ್ ಆಫೀಸರ್ ಆಗಿರುವ ಶೀ ಗೋಪಾಲಕೃಷ್ಣ ದೂರವಾಣಿ ಸಂಖ್ಯೆ:-080-22866200 ಅಥವಾ 9483163850 ರಲ್ಲಿ ಸಂಪರ್ಕಿಸಿ , ಕಾರ್ಯಕ್ರಮಕ್ಕೆ ಆಹ್ವಾನಿಸುವುದು ಮತು ಸದರಿಯವರಿಂದ ಸ್ಪರ್ಧಿಗಳ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವುದು.

34 ಶೈಕ್ಷಣಿಕ ಜಿಲ್ಲೆಗಳಿಂದ 34 ಸ್ಪರ್ಧಿಗಳು ಭಾಗವಹಿಸಲಿದ್ದು, ಸಮಯ ನಿರ್ವಹಣೆಯ ದೃಷ್ಠಿಯಿಂದ ಸಮರ್ಪಕವಾಗಿ ಯೋಜಿಸಿಕೊಂಡು ಯಾವುದೇ ಲೋಪಬಾರದಂತೆ ಕಾರ್ಯಕ್ರಮ ಆಯೋಜಿಸುವುದು. ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಗರಿಷ್ಠ ಮೊತ್ತ ರೂ. 50,000=00 (ರೂ . ಐವತ್ತು ಸಾವಿರ ಮಾತ್ರ ) ಆಗಿದ್ದು, ಈ ಮೊತ್ತದ ಮಿತಿಯಲ್ಲಿ ಕಾರ್ಯಕ್ರಮ ಆಯೋಜಿಸುವುದು. ಅನುದಾನವನ್ನು ಬಿಡುಗಡೆ ಮಾಡಿದ್ದು, ಮೊತ್ತವನ್ನು AC/DC ಬಿಲ್ ನಲ್ಲಿ ಡ್ರಾ ಮಾಡಲು ಅನುಮತಿಸಿದೆ. <u>ಕಾರ್ಯಕ್ರಮ ಪೂರ್ಣಗೊಂಡ 5 ದಿನಗಳ ಒಳಗಾಗಿ ಈ ಕೆಳಕಂಡ ಮಾಹಿತಿಗಳನ್ನು ಈ ನಿರ್ದೇಶನಾಲಯಕ್ಕೆ ಸಲ್ಲಿಸುವುದು.</u>

1. ಸ್ಪರ್ಧಿಗಳ ಮತ್ತು ಮಾರ್ಗದರ್ಶಿ ಶಿಕ್ಷಕರ ನೋಂದಣಿ ಮತ್ತು ಹಾಜರಾತಿ ಪ್ರತಿ
2. ತೀರ್ಪುಗಾರರ ವಿವರ- ಈ ಕೆಳಕಂಡಂತೆ

| ಕ್ರ.ಸಂ | ತೀರ್ಪುಗಾರರ ಹೆಸರು ಮತ್ತು ಹುದ್ದೆ | ದೂರವಾಣಿ ಸಂಖ್ಯೆ |
|---|---|---|
| | | |
| | | |
| | | |

3. ಕಾರ್ಯಕ್ರಮದ ವರದಿ.ಪೋಟೋಗಳ ಸಾಪ್ಟ್ ಕಾಪಿ ಮತ್ತು ವೀಡಿಯೋ ಡಿ.ವಿ.ಡಿ.
4. ವಿಜೇತರ ವಿವರಗಳು: ಹೆಸರು, ಶಾಲೆ ಹೆಸರು ಮತ್ತು ವಿಳಾಸ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ದೂರವಾಣಿ ಸಂಖ್ಯೆ .

ನಿರ್ದೇಶಕರು (ಪ್ರೌಢ ಶಿಕ್ಷಣ)

ಪ್ರತಿಯನ್ನು

1. ನಿರ್ದೇಶಕರು ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಸಂಸ್ಥೆ ಬೆಂಗಳೂರು-85 ರವರ ಮಾಹಿತಿಗಾಗಿ
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ತುರ್ತು ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮಾಹಿತಿಗಾಗಿ
4. ನಿರ್ದೇಶಕರು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ , ಕಸ್ತೂರಿ ಬಾ ರಸ್ತೆ ಬೆಂಗಳೂರವರ ಮಾಹಿತಿಗಾಗಿ

## ಅನುಬಂಧ-1

**2018-19 ನೇ ಸಾಲಿನ ರಾಜ್ಯ ಮಟ್ಟದ ವಿದ್ಯಾರ್ಥಿಗಳ ವಿಜ್ಞಾನ ವಿಚಾರ ಗೋಷ್ಠಿ ಕಾರ್ಯಕ್ರಮ ಆಯೋಜನೆಗೆ ವೆಚ್ಚಕ್ಕೆ ಬಿಡುಗಡೆ ಮಾಡಲಾದ ಅನುದಾನ ರೂ. 50,000-00 ಗಳ ಮಿತಿಯೊಳಗೆ ಖರ್ಚು ಮಾಡುವ ಬಗೆಗಿನ ಹಂಚಿಕೆ ಪಟ್ಟಿ.**

| ಕ್ರ.ಸ. | ಖರ್ಚಿನ ವಿವರ | ಮೊತ್ತ |
|---|---|---|
| 1 | ಟಿಎ. ಮತ್ತು ಡಿ.ಎ.<br>ಅ) ಭಾಗವಹಿಸುವ ವಿದ್ಯಾರ್ಥಿ ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಸಾಮಾನ್ಯ ಬಸ್ ದರ ಅಥವಾ 2ನೇ ದರ್ಜೆ ರೈಲು ದರ | ರೂ. 18,500-00 |
| 2 | ಬಹುಮಾನ :<br>ಅ) 1ನೇ ಬಹುಮಾನ - 3,000-00<br>2ನೇ ಬಹುಮಾನ - 2,000-00<br>3ನೇ ಬಹುಮಾನ - 1,000-00<br>ಒಟ್ಟು ರೂ. 6,000-00<br>ಆ) 5 ಸಮಾಧಾನಕರ ಬಹುಮಾನಗಳು : ಒಬ್ಬ ವಿದ್ಯಾರ್ಥಿಗೆ ರೂ. 500 ರಂತೆ 500 * 5= 2500 | ರೂ. 8500-00 |
| 3 | 3 ಜನ ತೀರ್ಪುಗಾರರಿಗೆ ಗೌರವ ಸಂಭಾವನೆ ರೂ 500*3=1500. | ರೂ. 1500-00 |
| 4 | ಕಾಫಿ/ಟೀ ಉಪಹಾರ ಮತ್ತು ಊಟದ ವೆಚ್ಚ. 100 * 90 =9000. | ರೂ. 9000-00 |
| 5 | 1. ಪೂರ್ವ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ಸಂ. ವ್ಯಕ್ತಿಗೆ ಸಂಭಾವನೆ - ರೂ. 250<br>2. ಟೈಂ ಕೀಪರ್ ಸಂಭಾವನೆ. 1 * 250 | ರೂ. 500-00 |
| 9 | ಕಾರ್ಯಕ್ರಮದ ನಿರ್ವಹಣಾ ವೆಚ್ಚ, ಸಾದಿಲ್ವಾರು, ಬ್ಯಾನರ್, ಸ್ಪರ್ಧಿಗಳು ಮತ್ತು ಮಾರ್ಗದರ್ಶಿ ಶಿಕ್ಷಕರು ತಂಗಿದಲ್ಲಿ ವೆಚ್ಚ ಭರಿಸಲು, ಫೋಟೊ, ವೀಡಿಯೋ, ದಾಖಲೀಕರಣ ಮತ್ತು ಇತರೆ ವೆಚ್ಚಗಳು. | ರೂ.12,000 |
| | ಒಟ್ಟು | ರೂ. 50,000-00 |

[ಒಟ್ಟು ರೂ. ಐವತ್ತು ಸಾವಿರ ರೂಪಾಯಿಗಳು ಮಾತ್ರ.]

ನಿರ್ದೇಶಕರು(ಪ್ರೌಢ ಶಿಕ್ಷಣ)